# ಪದಬಂಧ



ಎಡದಿಂದ ಬಲಕ್ಕೆ:

1. ಆಂಜನೇಯನ ಕೃಪೆ; ಅವನು ಯಾವುದರಲ್ಲೂ ಸೋಲನ್ನೇ ಕಂಡಿಲ್ಲ 3
3. ಶ್ರದ್ಧೆ ಇದ್ದವರಿಗೆ ಮಾತ್ರ ಅದ್ಭುತವೆನಿಸುತ್ತದೆ, ಕಡಲು 3
4. ಮುಖಮಾರ್ಜನಕ್ಕೆಂದು ಹೋದವರು ಸ್ನಾನಕ್ಕೇ ಇಳಿದರೇ? 3
6. ಆತ ಬೇಡಿದ್ದು ಕೇವಲ ಒಂದು ಊಟ 3
7. ಪ್ರಾಚೀನರ ಕಾರ್ಯಗಳನ್ನು ಎಲ್ಲರಿಗೂ ತಿಳಿಸಿದವ ಈತನೇ 4
9. ಗೋವಿಂದನಿಗೆ ಅವರೆಲ್ಲ ಸೇರಿ ಸಮರ್ಪಿಸಿದ್ದು ಈ ತಾವರೆ 4
11. ನೀವೆಣಿಸಿದಂತಲ್ಲ, ಇದು ಪರಿಶುದ್ಧ ಬೆಣ್ಣೆ 4
13. ಸುಖ ಲೋಲುಪರಿಗೆ ತಕ್ಕದ್ದು ಅಸುರ ವೈರಿಗಳ ಪ್ರಪಂಚ 4
15. ಅಡುಗೆ ಮನೆಯಲ್ಲೇ ಎಲ್ಲಾದರೂ ಅವಿಸಿಕೋ 3
17. ತಾಜಾತನ ಕಿಂಚಿತ್ತೂ ಕೆಡದಂತೆ ಜೋಪಾನ 3
18. ಜೇನಿನಂತೆ ಕಂಡಿದ್ದಕ್ಕೆ ಮುತ್ತಿದ್ದು ಮನುಷ್ಯರೇ ತಾನೇ? 3
19. ಜರತಾರಿ ವಸ್ತ್ರಗಳ ಸುರಕ್ಷತೆಗೆ ತಕ್ಕ ಭದ್ರ ಪೆಟ್ಟಿಗೆ 3

ಮೇಲಿಂದ ಕೆಳಕ್ಕೆ:

1. ಅಂದು ನಡೆದ ಕೆಲಸಕ್ಕೆ ಇಷ್ಟು ಕೊಟ್ಟದ್ದೇ ಹೆಚ್ಚು, ಬಿಡಿ 3
2. ಮಳೆಯಲ್ಲೇ ನಡೆದು ಬಂದ ಜೋಡಿ 3
3. ಶಾರದೆಗೆ ಕೈ ಜೋಡಿಸಿ ಪಡೆದದ್ದು ಸಕ್ಕರೆ 3
5. ನಂಬಿಕೆ ಬರದವರ ಜೊತೆ ಸ್ನೇಹಕ್ಕೆ ಒಪ್ಪಿಗೆ ಇಲ್ಲ 3
7. ಪ್ರಸಿದ್ಧ ಜನರೆಲ್ಲ ಬಳಸುವುದು ಇದೇ ಅಲಂಕಾರ ಸಾಮಗ್ರಿ 4
8. ಶೀತಕಾಲದಲ್ಲಿ ಹರಿದು ಬಂದ ನೀರು ಎಷ್ಟು ಕೊಳೆಭರಿತ! 4
9. ಆಭಾಸ ಆಗಬಾರದೆಂದರೆ ಚೆನ್ನಾಗಿ ಕಲಿ 4
10. ದಾಕ್ಷಿಣ್ಯಕ್ಕೆ ದೊಣ್ಣೆ ಹಿಡಿದವನೇ ಸೇನಾನಿಯಾದನೇ? 4
12. ನೂರಾರು ಜನರಿಂದ ಆಯ್ಕೆಯಾದ ಹೂವು ಈ ತಾವರೆ 3
14. ಮರೆತೆನೆನ್ನಲು ಸಾಧ್ಯವೇ ಇಲ್ಲ, ಅಂಥ ಸೊಬಗು 3
15. ಆತ್ಮೀಯರನ್ನು ಕಾಣುವ ಕಾಲ ಬಹಳ ದೂರವೇನಿಲ್ಲ 3
16. ಜೇಬುಗಳ್ಳರುಂಟೇ ಇಲ್ಲೂ? ಇದು ಹಳೇ ವಸ್ತುಗಳ ಮಾರುಕಟ್ಟೆ 3

---

## 09.09.2021 ಉತ್ತರಗಳು

ಎಡದಿಂದ ಬಲಕ್ಕೆ:

1. ಉಪದೇಶ 3. ಗಮಾರ 4. ಬದರಿ 6. ಗರಿಮುರಿ 7. ಹುರುಪು 9. ಸಂಭವ 11. ತುರಗ 13. ಯವನ 15. ರಾಮಾನುಜ 17. ನಿರ್ಭಯ 18. ಮುನಿಸು 19. ಸನ್ನಿಧಾನ

ಮೇಲಿಂದ ಕೆಳಕ್ಕೆ:

1. ಉರಗ (=ಸರೀಸೃಪ) 2. ಶಬರಿ 3. ಗದರು 5. ರಿಷಭ 7. ಹುಸಿಮಾತು 8. ಪುರೋಭಾಗ 9. ಸಂಪ್ರದಾಯ 10. ವರ್ತಮಾನ 12. ರಜನಿ 14. ವರ್ಣಿಸು 15. ರಾಯಸ 16. ಜಮುನ (=ಯಮುನ)

ಪ್ರಶ್ನಾಂಕಣ

## ವ್ಯೋಮಯಾನಕ್ಕೆ ಮಹಿಳೆಯರೇ ಹೆಚ್ಚು ಸೂಕ್ತವೇ?

ವ್ಯೋಮಯಾನ: ಅದೊಂದು ಬಗೆಯ ತೀರ ವಿಭಿನ್ನ, ವಿಶಿಷ್ಟ ಪಯಣ. ಬಾಹ್ಯಾಕಾಶ ಸಂಸ್ಥೆಗಳಿಂದ ಆಯ್ಕೆಗೊಂಡು, ತರಬೇತುಗೊಂಡ ವ್ಯಕ್ತಿಗಳಿಗಷ್ಟೇ ಈ ಪಯಣಕ್ಕೆ ಅರ್ಹತೆ. ಅಂತರಿಕ್ಷಕ್ಕೆ ತೆರಳಿ, ಅಲ್ಲಿ ವಿವಿಧ ವೈಜ್ಞಾನಿಕ ಚಟುವಟಿಕೆಗಳನ್ನು ಕೈಗೊಳ್ಳುವುದು ಉದಾಹರಣೆಗೆ ವ್ಯೋಮನಿಲ್ದಾಣಗಳಲ್ಲಿ (ಚಿತ್ರ 2) ಉಳಿದು ನಾನಾ ಪ್ರಯೋಗ ಮತ್ತು ಸಂಶೋಧನೆಗಳನ್ನು ನಡೆಸುವುದು, ವ್ಯೋಮದಲ್ಲೇ ಕೃತಕ ಉಪಗ್ರಹಗಳ ದುರಸ್ತಿ ಮಾಡುವುದು, ಚಂದ್ರ (ಚಿತ್ರ 3) ಮಂಗಳ ಗ್ರಹ ಮುಂತಾದ ಅನ್ಯ ಕಾಯಗಳನ್ನು ತಲುಪಿ ಅಲ್ಲಿ ವಸಾಹತುಗಳನ್ನು ಸ್ಥಾಪಿಸುವುದು, ತಾರಾ ಪ್ರವಾಸಗಳನ್ನು ಕೈಗೊಳ್ಳುವುದು... ಇತ್ಯಾದಿ ಇಂತಹ 'ವ್ಯೋಮಯಾತ್ರಿ'ಗಳ ಕೆಲಸ . ಹಾಗೆ ಈವರೆಗೆ 37 ರಾಷ್ಟ್ರಗಳ ಸಮೀಪ 560 ವ್ಯೋಮ ಯಾತ್ರಿಗಳು ಅಂತರಿಕ್ಷ ಯಾನ ಮಾಡಿದ್ದಾರೆ. ಅಚ್ಚರಿಯ ಒಂದು ಅಂಶ ಏನೆಂದರೆ, ಇಷ್ಟೂ ವ್ಯೋಮ ಯಾತ್ರಿಗಳಲ್ಲಿ ಮಹಿಳೆಯರ ಸಂಖ್ಯೆ ಪುರುಷರಿಗಿಂತ ಬಹಳ ಕಡಿಮೆ ಕೇವಲ 65 ಅಷ್ಟೇ!

ಅಚ್ಚರಿ ಏಕೆಂದರೆ, ದೈಹಿಕ ಶಕ್ತಿಯಲ್ಲಿ ಕೊಂಚ ಕಡಿಮೆ ಎಂಬುದನ್ನು ಬಿಟ್ಟರೆ ಉಳಿದೆಲ್ಲ ಸಾಮರ್ಥ್ಯಗಳಲ್ಲೂ ಪುರುಷರಿಗೆ ಕಿಂಚಿತ್ತೂ ಕಡಿಮೆ ಇಲ್ಲದ ಮಹಿಳೆಯರು ವ್ಯೋಮ ಯಾನದಲ್ಲಿ ಮಾತ್ರ ಇಷ್ಟು ಕಡಿಮೆ ಸಂಖ್ಯೆಯಲ್ಲಿದ್ದಾರೆ! ವಿಪರ್ಯಾಸ ಏನೆಂದರೆ, ವ್ಯೋಮಯಾನಕ್ಕೆ ಉತ್ತಮವೆನಿಸುವ ಹಲವಾರು ಗುಣಗಳಲ್ಲಿ ವಾಸ್ತವವಾಗಿ ಪುರುಷರಿಗಿಂತ ಮಹಿಳೆಯರೇ ಹೆಚ್ಚು ಸೂಕ್ತ! ಹೇಗೆಂದು ನೀವೇ ಗಮನಿಸಿ:

- ಸ್ವಾಭಾವಿಕವಾಗಿಯೇ ಯುವ ಮಹಿಳಾ ವ್ಯೋಮ ಯಾತ್ರಿಗಳ (ಚಿತ್ರ 1) ಶರೀರದ ಗಾತ್ರ ಮತ್ತು ತೂಕ ಪುರುಷರಿಗಿಂತ ಕಡಿಮೆ. ಹಾಗಾಗಿ ವ್ಯೋಮನೌಕೆಗಳ 'ಹೊರೆ' ಕಡಿಮೆ ; ಉಳಿತಾಯವಾದ ಬೇಕಾಗುವ ಇಂಧನವೂ ಕಡಿಮೆ. ಮಹಿಳೆಯರಿಗೆ ಪುರುಷರಿಗಿಂತ ಶೇಕಡ 15 ರಿಂದ 25 ರಷ್ಟು ಕಡಿಮೆ ಆಹಾರವೇ ಸಾಕು ; ಅವರಿಂದ ಉತ್ಪಾದನೆಗೊಳ್ಳುವ ತ್ಯಾಜ್ಯಗಳೂ ಕಡಿಮೆ. ಕೆಲಸ ಮಾಡಲು, ವ್ಯಾಯಾಮ ಮಾಡಲು, ಮಲಗಲು ಬೇಕಾಗುವ ಸ್ಥಳಾವಕಾಶವೂ ಪುರುಷರಿಗಿಂತ ಕಡಿಮೆಯೇ ಸಾಕು. ವ್ಯೋಮ ವಾಹನಗಳಲ್ಲಿ ಪ್ರತಿ ಕಿಲೋ ಕಡಿಮೆ ತೂಕ, ಪ್ರತಿ ಘನ ಅಡಿ ಕಡಿಮೆ ಜಾಗವೂ ಕೋಟಿಗಟ್ಟಳೆ ರೂ. ವ್ಯಯವನ್ನು ಕಡಿಮೆ ಮಾಡುತ್ತವೆ!



- ವ್ಯೋಮಯಾನದಿಂದ ಶರೀರದ ಮೇಲಾಗುವ ದುಷ್ಪರಿಣಾಮಗಳ ಪ್ರಭಾವವೂ ಮಹಿಳೆಯರ ಮೇಲೆ ಕಡಿಮೆ. ಉದಾಹರಣೆಗೆ ಪುರುಷರ ದೃಷ್ಟಿ ಶಕ್ತಿಯನ್ನು ಕುಂದಿಸುವ ದೀರ್ಘ ವ್ಯೋಮ ವಾಸ ಮಹಿಳೆಯರ ಮೇಲೆ ಅಂಥ ಪರಿಣಾಮವನ್ನು ಬೀರುವುದಿಲ್ಲ.
- ತಿಂಗಳುಗಳ ಕಾಲದ ಅನ್ಯ ಗ್ರಹ ಗ್ರಹ ಯಾನ, ವರ್ಷಗಟ್ಟಳೆಯ ತಾರಾ ಪ್ರವಾಸ, ಅನ್ಯ ಗ್ರಹಗಳಲ್ಲಿ ಮಾನವ ವಸಾಹತುಗಳ ಸ್ಥಾಪನೆ ಇತ್ಯಾದಿ ಸುದೀರ್ಘ ಅವಧಿಯ ವ್ಯೋಮ ಚಟುವಟಿಕೆಗಳಲ್ಲಿ ಅತ್ಯವಶ್ಯವಾದ ಹೊಂದಾಣಿಕೆ, ಮಾನಸಿಕ ಸ್ಥಿರತೆ ಇತ್ಯಾದಿ ಗುಣಗಳಲ್ಲಿ ಮಹಿಳೆಯರದೇ ಮೇಲುಗೈ. ಹಾಗೆಲ್ಲ ಆಗಿರುವುದರಿಂದ ವ್ಯೋಮಯಾನಕ್ಕೆ ಮಹಿಳೆಯರೇ ಹೆಚ್ಚು ಸೂಕ್ತ.

■ ಎನ್. ವಾಸುದೇವ್